ಓ.ಎಸ್. ನಂ. 47/2018
ಪಿ ಡಬ್ಲ್ಯೂ -1

**sd/- ಸಾಕ್ಷಿಯನ್ನು ದಿನಾಂಕ: 16-10-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ PDT ರವರಿಂದ**

**1.** ನನ್ನ ಹಾಗೂ ಪ್ರತಿವಾದಿ ಮತ್ತು ಕೆ.ಸಿ. ಲಿಂಗಣ್ಣ ನವರ ನಡುವೆ ಮನೆಯ ಜಾಗ ಮತ್ತು ಅದರ ಸುತ್ತಲಿನ ಜಾಗದ ವಿಚಾರವಾಗಿ ಸುಮಾರು 10-12 ವರ್ಷಗಳಿಂದ ವ್ಯಾಜ್ಯಗಳು ನಡೆಯುತ್ತಿರುತ್ತವೆಂದರೆ ಸರಿ. ಕೆ ಸಿ ಲಿಂಗಣ್ಣ ನವರು ನನ್ನ ವಿರುದ್ಧ OS 271/2016 ರಂತೆ ದಾವೆಯನ್ನು ಸಲ್ಲಿಸಿದ್ದು ಸದರಿ ದಾವೆ ಇತ್ಯರ್ಥಕ್ಕೆ ಬಾಕಿ ಇರುತ್ತದೆಂದರೆ ಸರಿ. OS 58/2014 ರ ದಾವೆಯಲ್ಲಿ ವಾದಿಗಳು ವಿಚಾರಣೆ ನೀಡದೇ ಇರುವ ಕಾರಣ ವಜಾ ಗೊಂಡಿರುತ್ತದೆಂದರೆ ಸರಿ. OS 58/2014 ರ ದಾವೆಯಲ್ಲಿ ನಾನು ಎದುರು ಕ್ಲೈಂ ನ್ನು ಕೇಳಿರುವುದಿಲ್ಲ. OS 58/2014 ರ ದಾವೆಯು 2 ವರ್ಷದೊಳಗಾಗಿ ಮುಕ್ತಾಯಗೊಂಡಿರುತ್ತದೆಂದರೆ ಸರಿಯಲ್ಲ, 2 ವರ್ಷ 10 ತಿಂಗಳು ನಡೆದಿರುತ್ತದೆ. OS 58/2014 ರ ದಾವೆಯನ್ನು ಸಲ್ಲಿಸಿದ್ದರಿಂದ ನನಗೆ ಯಾವ ರೀತಿಯಲ್ಲಿ ನಷ್ಟವಾಗಿರುತ್ತದೆಂದು ನಿರ್ದಿಷ್ಟವಾಗಿ ಈ ಕೇಸಿನ ವಾದ ಪತ್ರದಲ್ಲಿ ತಿಳಿಸಿರುವುದಿಲ್ಲ.

2. ಈಶ್ವರಯ್ಯ ಮತ್ತು ಶಾಂತಮ್ಮ ನವರಿಗೆ ಸೇರಿದ ಜಾಗದಲ್ಲಿ ಬೆಸ್ಕಾಂ ಇಲಾಖೆಯವರು ವಿದ್ಯುತ್ ಕಂಬವನ್ನು ನೆಡಲು ನಾನು ಸಹಾಯ ಮಾಡಿರುತ್ತೇನೆಂದು OS 58/2014 ರ ದಾವೆಯನ್ನು ಸಲ್ಲಿಸಿರುತ್ತಾರೆಂದರೆ ನಾನು ಯಾರಿಗೂ ಸಹಾಯ ಮಾಡಿರುವುದಿಲ್ಲ, ಸದರಿ ದಾವೆಯನ್ನು ಸಲ್ಲಿಸಿದ್ದದ್ದರಿಂದ ನನಗೆ ಮಾನ ನಷ್ಟವಾಗಿರುತ್ತದೆ. OS 58/2014 ರ ದಾವೆಯನ್ನು ಸಲ್ಲಿಸಿದ್ದರಿಂದ ನನಗೆ ಯಾವುದೇ ಮಾನನಷ್ಟ ಆಗಿರುವುದಿಲ್ಲ ಎಂದರೆ ಸರಿಯಲ್ಲ. OS 58/2014 ರ ದಾವೆಯಲ್ಲಿ ನಾನು ನ್ಯಾಯಾಲಯದಲ್ಲಿ ನಡೆದ ವಿಚಾರಣೆ ದಿನಾಂಕಗಳಲ್ಲಿ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ ಪ್ರತಿವಾದಿ ನಡುವೆ ಇದ್ದ ಹಳೆ ದ್ವೇಷದಿಂದ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**sd/-**
**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**